ಮಾಡೋಣ. ದಿವಂಗತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಆಶಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

[ಈ ಹಂತದಲ್ಲಿ ಸದನವು ಮೃತರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿತು]

ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಕೆ.ಎಂ.ಶಿವಲಿಂಗೇಗೌಡ :– ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲಿ ...

ಅಧ್ಯಕ್ಷರು :– ಒಂದು ನಿಮಿಷ. ನಂತರ ತಾವು ಮಾತನಾಡುವಿರಂತೆ. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಸಭೆಯಲ್ಲಿ ಮಂಡಿಸಬೇಕು.

2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಮೊದಲನೇ ಪಟ್ಟಿ

ಶ್ರೀ T.B. ಜಯಚಂದ್ರ [ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು] (ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ):– ಮಾನ್ಯ ಅಧ್ಯಕ್ಷರೆ

<u>1978 ರ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ</u> :

1. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳನ್ನು ರಚಿಸಿ ದಿನಾಂಕ 07.03.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಸಿಆಸುಇ 43 ಸೇವನೇ 2008ರಲ್ಲಿನ ನಿಯಮ 2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 06.08.2012 ಹೊರಡಿಸಲಾದ ಅಧಿಸೂಚನೆ ಸಂಖ್ಯೆ : ಸಿಆಸುಇ 59 ಸೇವನೇ 2012.

2. ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 14ಕ್ಕೆ ತಿದ್ದುಪಡಿ ಮಾಡಿ ದಿನಾಂಕ 21.11.2012 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ : ಸಿಆಸುಇ 3 ಎಸ್ ಎಂ ಆರ್. 2010.
3. ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ)(ಸಾಮಾನ್ಯ) ನಿಯಮಗಳು 2006ರ ನಿಯಮ 8,9 ಹಾಗೂ 10ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29.10.2011 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಸಿಆಸುಇ 26 ಸೇವನೆ 2011.
4. ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮ 1978ರ ನಿಯಮಗಳಲ್ಲಿ ಕರ್ನಾಟಕ ಸಾಮಾನ್ಯ ಸೇವೆಗಳ (ಸರ್ಕಾರಿ ಅತಿಥಿ ವ್ಯವಸ್ಥೆ ನೇಮಕಾತಿ) ನಿಯಮಗಳು 2012ರ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 20.11.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ :ಡಿಪಿಎಆರ್ 26 ಹೆಚ್ ಇ ಟಿ 2003.

1978 ರ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

5. ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 15ಕ್ಕೆ ತಿದ್ದುಪಡಿ ಮಾಡಿ ದಿನಾಂಕ 03.09.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಸಿಆಸುಇ 15 ಸೇಇವಿ 2011.

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ :

6. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ಭತ್ತ ಮತ್ತು ಅಕ್ಕಿ, ಗೋಧಿ, ದ್ವಿದಳ ಧಾನ್ಯಗಳು, ಅಕ್ಕಿ ಮತ್ತು ಗೋದಿ ಹಿಟ್ಟು, ಸೂಜಿ ಮತ್ತು ಗೋಧಿ ಮೈದ ಸರಕುಗಳ

ಮಾರಾಟದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ದಿನಾಂಕ 01.04.2013 ರಿಂದ ದಿನಾಂಕ 31.03.2014ರವರೆಗೆ ಅನ್ವಯವಾಗುವಂತೆ ದಿನಾಂಕ 01.04.2013ರಿಂದ ಜಾರಿಗೆ ಬರುವಂತೆ ವಿನಾಯಿತಿಗೊಳಿಸಿ ದಿನಾಂಕ 05.03.2013ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 36 ಸಿಎಸ್‌ಎಲ್ 2013(I)

7. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ಅಡಿಗೆ ಮನೆಯಲ್ಲಿ ಅಥವಾ ಗೃಹಕೃತ್ಯದಲ್ಲಿ ಬಳಸಿದ ಸರಕನ್ನು ತುಂಬಿಡುವ ಪೆಟ್ಟಿಗೆಗಳು ಎಂದರೆ, ಟಿಫೀನ್ ಕ್ಯಾರೀಯರ್‌ಗಳು, ವಿಸಿಲ್‌ಗಳು, ಮಡಕೆಗಳು, ಪಟ್ಟಿಗೆಗಳು, ಕ್ಯಾನ್‌ಗಳು ಮತ್ತು ಮುಚ್ಚಳಗಳ ಸಹಿತ ಅಥವಾ ಮುಚ್ಚಳ ಇಲ್ಲದೆ ಇರುವ ವಿವಿಧ ಆಕಾರಗಳ ಡ್ರಮ್ಮುಗಳು, ಬೇಸಿನ್‌ಗಳು, ಬೋಗುಣಿಗಳು, ಗಾಜಿನ ಲೋಟಗಳು, ಜಾರಿಗಳು, ಹೂಜಿಗಳು, ಬಾಗಿಲುಗಳು ಮತ್ತು ಕಿಟಕಿಗಳ ರಚನೆಗಳು ಮತ್ತು ವ್ಯರ್ಥ ಪ್ಲಾಸ್ಟಿಕ್‌ನಿಂದ ಮಾಡಿದ ಬಾಗಿಲು ಮತ್ತು ಕಿಟಕಿಯ ಕದ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನೀಡಿದ ಪೂರಕ ಪೌಷ್ಟಿಕ ಆಹಾರ, ಕೋಕೋ ಹೊಟ್ಟು ಮತ್ತು ಸೋಂಕು ಪ್ರತಿರೋಧ ಪುಡಿ ಮಾಡುವುದಕ್ಕೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ಶೇಕಡ ಐದೂವರೆಯಷ್ಟು ಕಡಿಮೆಗೊಳಿಸಿ ದಿನಾಂಕ 01.04.2013 ರಿಂದ ಜಾರಿಗೆ ಬರುವಂತೆ ದಿನಾಂಕ 05.03.2013 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 36 ಸಿಎಸ್‌ಎಲ್ 2013(II)

8. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ಎಲ್ಲಾ ಬಗೆಗಳ ಪಾದರಕ್ಷೆಯ ಮಾರಾಟದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ಪ್ರತಿ ಜೊತೆಗೆ ಎರಡು ನೂರು ರೂಪಾಯಿಗಳವರೆಗೆ ವಿನಾಯಿತಿ ನೀಡಿ ದಿನಾಂಕ 01.04.2013 ರಿಂದ ಜಾರಿಗೆ ಬರುವಂತೆ ದಿನಾಂಕ 05.03.2013 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 36 ಸಿಎಸ್‌ಎಲ್ 2013.

9. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ಸೋಯಾಬಿನ್ ಎಣ್ಣೆ ರಹಿತ ಕೇಕ್ (ಸೋಯಾಬಿನ್ ಹಿಂಡಿ)

ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ಶೇಕಡ ಒಂದರಷ್ಟನ್ನು ಕಡಿಮೆಗೊಳಿಸಿ ದಿನಾಂಕ 01.04.2013 ರಿಂದ ಜಾರಿಗೆ ಬರುವಂತೆ ದಿನಾಂಕ 05.03.2013 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 36 ಸಿಎಸ್‌ಎಲ್ 2013(IV)

10. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ ಡಿಸೇಲ್ ಅಥವಾ ಸೇಮಿ ಡಿಸೇಲ್ ಎಂಜಿನ್‌ಗಳು ಎಳೆದುಕೊಂಡು ಹೋಗುವ ಚಕ್ರವುಳ್ಳ ಅಡಿಗಟ್ಟಿನ ಮೇಲಿರುವ ಏರ್ ಕಂಪ್ರಸ್ಸರ್‌ಗಳು ಹಾಗೂ ವರ್ಗಾಯಿಸಬಹುದಾದ ಏರ್ ಕಂಪ್ರಸ್ಸರ್‌ಗಳು ಮತ್ತು ವಾಟರ್ ವೆಲ್ ಕಂಪ್ರಸ್ಸರ್‌ಗಳ ಭಾಗಗಳ ಅಡಿಕೆ ಸಿಪ್ಪೆ ತೆಗೆಯುವ ಯಂತ್ರಗಳನ್ನು ನಿರ್ದಿಷ್ಟಪಡಿಸಿ ಶೀರ್ಷಿಕೆ ಮತ್ತು ಉಪಶೀರ್ಷಿಕೆಯಡಿಯಲ್ಲಿ ಅಬಕಾರಿ ಸುಂಕದ ಉದ್ದೇಶಗಳಿಗಾಗಿ ಒಳಗೊಂಡ ಎಲ್ಲಾ ವ್ಯಾಪಾರಿ ಸರಕುಗಳನ್ನು ಅಧಿಸೂಚನೆಯ ವ್ಯಾಪ್ತಿಗೊಳಪಡಿಸಲು ದಿನಾಂಕ 01.04.2013 ರಿಂದ ಜಾರಿಗೆ ಬರುವಂತೆ ದಿನಾಂಕ 05.03.2013 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 36 ಸಿಎಸ್‌ಎಲ್ 2013(V)

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 25ರ ಮೇರೆಗೆ:

11. 1899ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಡಿ ಮೀನುಗಾರರು ಮೀನುಗಾರಿಕೆ ಚಟುವಡಿಕೆಗಳಲ್ಲಿ ಬಳಸಲು ಒಂದು ಲಕ್ಷ ಮೂವತ್ತು ಸಾವಿರ(1,30,000) ಕಿಲೋ ಲೀಟರುಗಳನ್ನು ಮೀರದಷ್ಟು ಡೀಸೆಲ್‌ನ ಮಾರಾಟದ ಮೇಲೆ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ವಿನಾಯಿತಿಗೊಳಿಸಿ ದಿನಾಂಕ 01.04.2013 ರಿಂದ ಜಾರಿಗೆ ಬರುವಂತೆ ದಿನಾಂಕ 05.03.2013 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್ ಡಿ 36 ಸಿಎಸ್‌ಎಲ್ 2013(VI)

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

12. ಕರ್ನಾಟಕ ನಾಗರಿಕ ಸೇವಾ ನಿಯಮಾಳಿಗಳ ನಿಯಮ 41ಸಿ, 112, 118–ಎ, 152–ಎ, 166, 167, 169, 197, 224–ಎ, 226 ಮತ್ತು 227, 292–ಸಿ, 439, 446 ಮತ್ತು 569ಕ್ಕೆ ತಿದ್ದುಪಡಿ ಮಾಡಿ ದಿನಾಂಕ 28.01.2013ರಂದ ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಎಫ್‌ಡಿ 03 ಸಿಎಸ್‌ಆರ್‌ಎ 2012(I)
13. 2002ರ ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಗಳ ನಿಯಮ ನಮೂನೆ–ಬಿ ಅನುಬಂಧಕ್ಕೆ ತಿದ್ದುಪಡಿ ಮಾಡಿ ದಿನಾಂಕ 28.01.2013ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಡಿ 03 ಎಸ್‌ಆರ್‌ಎ 2012(II) ಗಳನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಮಾನ್ಯ ಗೃಹ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

1978ರ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

ಕರ್ನಾಟಕ ನಾಗರಿಕ ಸೇವಾ ಅಧಿನಿಯಮ 1978ರ ಅನುಚ್ಛೇದ 3(1)ರಲ್ಲಿನ ಅಧಿಕಾರದಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ವೃಂದ ಮತ್ತು ನೇಮಕಾತಿ (ತಿದ್ದುಪಡಿ) ನಿಯಮಗಳನ್ನು ರಚಿಸಿ ದಿನಾಂಕ 17.09.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಒಇ 166 ಪಿಪಿಇ 2008 (ಭಾಗ– I)ನ್ನು ಮಂಡಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು :– ಮಾನ್ಯ ಅಧ್ಯಕ್ಷರೆ.

1978ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

1. 2001ರ ಕರ್ನಾಟಕ ಸಾಮಾನ್ಯ ಸೇವೆಗಳು (ಭಾಷಾಂತರ ನಿರ್ದೇಶನಾಲಯ) (ನೇಮಕಾತಿ) (ತಿದ್ದುಪಡಿ) ನಿಯಮಗಳ ಅನುಬಂಧದ ತಿದ್ದುಪಡಿ ಮಾಡಿ ದಿನಾಂಕ 11.01.2013 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 14 ಭಾನಿವಿ 2011

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ 2009, ಸೆಕ್ಷನ್ 92(1)ರ ಪ್ರಕರಣದ ಮೇರೆಗೆ:

2. 2012–13ನೇ ಸಾಲಿನ ಸೌತ್ ಈಸ್ಟ್ ಏಶಿಯನ್ ಲಾ ಕಾಲೇಜು, ಬೆಂಗಳೂರು ಈ ಸಂಸ್ಥೆಗೆ 5 ವರ್ಷದ ಬಿ.ಎ., ಎಲ್.ಎಲ್.ಬಿ., ಕೋರ್ಸಿಗೆ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ ಅನುಮತಿ ನೀಡುವ ಕುರಿತು ದಿನಾಂಕ 17.12.2012ರಂದು ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ ಲಾ 208 ಕೆಎಲ್ಎಂ 2012.

1964ರ ಕರ್ನಾಟಕ ಗೋವಧೆಯ ಪ್ರತಿ ಬಂಧಕ ಮತ್ತು ಜಾನುವಾರು ಸಂರಕ್ಷಣೆಯ ಅಧಿನಿಯಮ 18(35)ರ ಪ್ರಕರಣದ ಮೇರೆಗೆ:

3. 2012ರ ಕರ್ನಾಟಕ ಗೋವಧೆಯ ಪ್ರತಿ ಬಂಧಕ ಮತ್ತು ಜಾನುವಾರು ಸಂರಕ್ಷಣೆ (ಗೋಸೇವಾ ಆಯೋಗದ ರಚನೆ) ನಿಯಮಾವಳಿಗಳನ್ನು ರಚಿಸಿ ದಿನಾಂಕ 05.02.2013ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಪಸಂಮೀ 68 ಪಪಾಯೋ 2011ಗಳನ್ನು ಮಂಡಿಸುತ್ತೇನೆ.

ಎರಡನೇ ಪಟ್ಟಿ

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಮುಖ್ಯಮಂತ್ರಿ ಪರವಾಗಿ) ಮಾನ್ಯ ಅಧ್ಯಕ್ಷರೆ.

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ
2. ಕರ್ನಾಟಕ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆ (ಕೆಬಿಟ್ಸ್) 2011–12ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ, (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು) ಅವರು:
ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಕಾಯ್ದೆ (ಕರ್ನಾಟಕ ಆಕ್ಟ್ 22 ಆಫ್ 1986) ಮೇರೆಗೆ

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತು ಲೆಕ್ಕಪರಿಶೋಧನಾ ವರದಿ

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಕಲಂ 50(2) ಮತ್ತು 47(4)ರ ಮೇರೆಗೆ :

1. ಗುಲ್ಬರ್ಗಾ ವಿಶ್ವವಿದ್ಯಾಲಯದ 2011–12ನೇ ಸಾಲಿನ ವಾರ್ಷಿಕ ವರದಿ.
2. ಮಂಗಳೂರು ವಿಶ್ವವಿದ್ಯಾಲಯದ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಕುವೆಂಪು ವಿಶ್ವವಿದ್ಯಾಲಯದ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ.
4. ಬೆಂಗಳೂರು ವಿಶ್ವವಿದ್ಯಾಲಯದ 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2010–11ನೇ ಸಾಲಿನ ವಾರ್ಷಿಕ ವರದಿ.
5. ತುಮಕೂರು ವಿಶ್ವವಿದ್ಯಾಲಯದ 2006–07, 2007–08, 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ.
6. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ 2010–11ನೇ ಸಾಲಿನ ವಾರ್ಷಿಕ ವರದಿ.
7. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ 1991ರ ಕಲಂ 25 ಹಾಗೂ 26ರ ಮೇರೆಗೆ

1. ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ 2011–12ನೇ ಸಾಲಿನ ವಾರ್ಷಿಕ ವರದಿ.

ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಅಧಿನಿಯಮ 2009ರ ಪ್ರಕರಣ 50(2)ರ ಮೇರೆಗೆ

1. ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 2008–09 ರಿಂದ 2011–12 ರವರೆಗಿನ ವಾರ್ಷಿಕ ವರದಿ ಮತ್ತು ಕಾರ್ಯಸಾಧನಾ ಅನುಸೂಚಿ ವರದಿ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಧಿನಿಯಮ 2011ರ ಪ್ರಕರಣ 49(2) ಮತ್ತು 46(4)ರ ಮೇರೆಗೆ

1. ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯದ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಧಿನಿಯಮ 2010ರ ಪ್ರಕರಣ 20ರ ಮೇರೆಗೆ

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ 2009ರ ಪ್ರಕರಣ 58(2) ಮತ್ತು 57(4)ರ ಮೇರೆಗೆ

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2008–09, 2009–10, 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಹಾಗೂ 2008–09, 2009–10, ಮತ್ತು 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧಿನಿಯಮ 1994ರ ಕಲಂ 28(3)ರ ಮೇರೆಗೆ :

1. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ, ಇದರ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿಗಳ ಅಧಿನಿಯಮ 619ಎ ಮೇರೆಗೆ:

1. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ). ಯನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] ಮಾನ್ಯ ಅಧ್ಯಕ್ಷರೆ, (ಯುವಜನ ಸೇವೆ ಹಾಗೂ ಮೀನುಗಾರಿಕೆ ರಾಜ್ಯ ಸಚಿವರ ಪರವಾಗಿ)

1956ರ ಕಂಪನಿ ಕಾಯ್ದೆಯ ಪರಿಚ್ಛೇದ 619ಎರ ಮೇರೆಗೆ

1. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಯನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ.

1956ರ ಕಂಪನಿಗಳ ಅಧಿನಿಯಮ 619ಎ ಮೇರೆಗೆ:

1. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)
2. ಕರ್ನಾಟಕ ಪಲ್ಪ್‌ವುಡ್ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)
3. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ 1974ರ ಕಲಂ 35(2) ಮತ್ತು 36(7)ರ ಮೇರೆಗೆ

4. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಪ್ರಕರಣ ಮೇರೆಗೆ :

1. ಉಡುಪಿ ಜಿಲ್ಲಾ ಪಂಚಾಯತ್‌ನ 2011–12ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು) ಅವರು: ಮಾನ್ಯ ಅಧ್ಯಕ್ಷರೆ.

ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಅಧಿನಿಯಮ 1950ರ ಕಲಂ 35(3)ರ ಮೇರೆಗೆ :

1. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ಆಡಳಿತ ವರದಿ.
2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಸಹಕಾರ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ.

ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಕಾಯ್ದೆ 1962ರ ಅನುಚ್ಛೇದ 31(11) ಮತ್ತು 31(ಎ)ರ ಮೇರೆಗೆ

1. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರ ವರದಿ.

ಶ್ರೀ **T.B.** ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ.

ಕಾಡಾ ಅಧಿನಿಯಮ 1980ರ ಕಲಂ 24ರ ಮೇರೆಗೆ:

1. ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ, ಇದರ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ)ರ ಮೇರೆಗೆ:

1. ಕರ್ನಾಟಕ ನೀರಾವರಿ ನಿಗಮ ನಿಯಮಿತ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿನಯ್‌ಕುಮಾರ್ ಸೊರಕೆ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು) :– ಮಾನ್ಯ ಅಧ್ಯಕ್ಷರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ 48(5) ಮತ್ತು 49ರ ಮೇರೆಗೆ:

1. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಷ್ಠಾನ ವರದಿ.
3. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು 2012–13ನೇ ಸಾಲಿನ ವಾರ್ಷಿಕ ವರದಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ 1973ರ ಕಲಂ 42ರ ಮೇರೆಗೆ

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2011–12ನೇ ಸಾಲಿನ ವಾರ್ಷಿಕ ಲೆಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಸಮಾಜ ಕಲ್ಯಾಣ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ.

1956ರ ಕಂಪನಿ ಕಾಯ್ದೆಯ ಪರಿಚ್ಛೇದ 619ಎ ಮೇರೆಗೆ

1. ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತದ 2009–10ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)ಯನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಆಹಾರ ಹಾಗೂ ಗ್ರಾಹಕರ ವ್ಯವಹಾರಗಳ ನಾಗರಿಕ ಸರಬರಾಜು ರಾಜ್ಯ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ.

1956ರ ಕಂಪನಿ ಕಾಯ್ದೆಯ ಪರಿಚ್ಛೇದ 619ಎರ ಮೇರೆಗೆ

1. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)ಯನ್ನು ಮಂಡಿಸುತ್ತೇನೆ.

ಶ್ರೀ T.B. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] (ಕೃಷಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 57ರ ಮೇರೆಗೆ:

1. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇದರ 2011–12ನೇ ಸಾಲಿನ ವಾರ್ಷಿಕ ವರದಿ.
2. ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇದರ 2011–12ನೇ ಸಾಲಿನ ವಾರ್ಷಿಕ ವರದಿ.

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ಕರ್ನಾಟಕ ರಾಜ್ಯ ಆಗ್ರೋಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್‌ನ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
4. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಡೆಟ್‌ನ 2011–12ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

3. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ವಿಷಯ : ವಿಧಾನ ಸೌಧದಲ್ಲಿ ಮಾನ್ಯ ಅರಣ್ಯ ಸಚಿವರಿಗೆ ಕೊಠಡಿ ಒದಗಿಸಿಕೊಡುವ ಸಲುವಾಗಿ ಗೋಡೆಯೊಂದನ್ನು ಒಡೆದು ಹಾಕಿರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ [ಶಿಕಾರಿಪುರ] :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಮನೆಯಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಸುಂದರವಾದ ವಿಧಾನ ಸೌಧವನ್ನು ಆ ಪುಣ್ಯಾತ್ಮ ಮಾನ್ಯ ಹನುಮಂತಯ್ಯನವರು ಕಟ್ಟಿಸಿ ಹೋಗಿದ್ದಾರೆ. ಅವರು ಒಳಗೆ ಬಂದರೋ, ಇಲ್ಲವೋ, ನನಗೆ ಗೊತ್ತಿಲ್ಲ. ಇವತ್ತು